152ಪೀ6 ದಿ:72 (53)
01072

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

* * * * *

**ವಿಷಯ:**

ಕಳೆದ 15 ವರ್ಷಗಳ ಹಿಂದೆ ಬೆಂಗಳೂರಿನ ಮಿಷನ್ ರಸ್ತೆಯಲ್ಲಿ ಫ್ಲೈ ಓವರ್(ರಸ್ತೆ ಅಗಲೀಕರಣ ಸಂದರ್ಭದಲ್ಲಿ) ನಿರ್ಮಿಸಲು ವಶಪಡಿಸಿಕೊಂಡ ಭೂಮಿಯ ಭೂ ಮಾಲೀಕರಿಗೆ ಪರಿಹಾರ (TDR) ನೀಡುವಲ್ಲಿ ಆಗಿರುವ ವಿಳಂಬ ಹಾಗೂ ತೊಂದರೆಗಳ ಕುರಿತು.

**ಉತ್ತರ:-**

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎನ್.ಆರ್ ರಸ್ತೆಯಿಂದ ಕೆ.ಹೆಚ್ ರಸ್ತೆವರೆಗಿನ ಮಿಷನ್ ರಸ್ತೆಯನ್ನು ಪರಿಷ್ಕೃತ ಮಹಾಯೋಜನೆ-2015 ರಂತೆ ರಸ್ತೆ ಅಗಲೀಕರಣಕ್ಕಾಗಿ ಅಧಿಸೂಚನೆ ಸಂಖ್ಯೆ: JDTP/RH/Phase-1/Sector-3/C2/PR3/2004-05ನ್ನು ದಿನಾಂಕ:02.03.2005ರಂದು ಹೊರಡಿಸಲಾಗಿದೆ. ರಸ್ತೆ ಅಗಲೀಕರಣಕ್ಕೆ ಅಗತ್ಯವಾಗಿ ಬೇಕಾಗಿರುವ ಜಮೀನನ್ನು ಆಸ್ತಿ ಮಾಲೀಕರಿಂದ ಪುಕ್ಕಟ್ಟೆಯಾಗಿ ಹಾಗೂ ಋಣಭಾರ ಮುಕ್ತವಾಗಿ ಪಡೆದುಕೊಂಡು ಇದರ ಬದಲಾಗಿ ಅಭಿವೃದ್ಧಿ ಪ್ರಮಾಣ ಪತ್ರ (Development Right Certificate) ಅನ್ನು ನೀಡಲು ಅಧಿಸೂಚನೆ ಹೊರಡಿಸಲಾಗಿತ್ತು.

ಅಭಿವೃದ್ಧಿ ಪ್ರಮಾಣ ಪತ್ರಕ್ಕಾಗಿ ಒಪ್ಪಿ ಮನವಿ ಸಲ್ಲಿಸಿದ್ದ ಸ್ವತ್ತಿನ ಮಾಲೀಕರಿಗೆ DRC ನೀಡಲಾಗಿದೆ. ಪ್ರಸ್ತುತ ಮಿಷನ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದ ಕೆಲವರಿಗೆ DRC ನೀಡಿ ಕೆಲವರಿಗೆ ನೀಡದೇ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಬಗ್ಗೆ ಯಾವುದೇ ದೂರು ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.

---

**ಸಂಖ್ಯೆ: ನಅಇ 26 ಬಿಬಿಎಲ್ 2024**

**(ಡಿ.ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ.